ನಿಮ್ಮೊಡನೆ

# ವಿದ್ಯಾರ್ಥಿಗಳಿಗೆ ಹಿಂಸೆ ಸರಿಯಲ್ಲ

ಶಾಲೆಯಲ್ಲಿ ಮಕ್ಕಳನ್ನು ಶಿಕ್ಷಿಸುವ ಹಳೆಯ ಚಾಳಿ ನಮ್ಮನ್ನು ಸುಲಭದಲ್ಲಿ ಬಿಟ್ಟುಹೋಗುವಂತೆ ಕಾಣುತ್ತಿಲ್ಲ. ಶಾಲೆಯಲ್ಲಿ ಎಳೆಯ ಮಕ್ಕಳಿಗೆ ದೈಹಿಕ ಶಿಕ್ಷೆ ವಿಧಿಸುವ ಹಲವು ಪ್ರಕರಣಗಳು ಈಗಲೂ ನಡೆಯುತ್ತಿರುವುದು ಖೇದದ ಸಂಗತಿ. ಚಾಮರಾಜನಗರ ಜಿಲ್ಲೆಯ ಶಾಲೆಯೊಂದರಲ್ಲಿ 14ರ ಎಳೆಯನೊಬ್ಬನಿಗೆ ಶಿಕ್ಷಕರೊಬ್ಬರು ಕಬ್ಬಿಣದ ಸ್ಕೇಲ್‌ನಲ್ಲಿ ಹೊಡೆದು ಆ ಹುಡುಗ ಎಡಗಣ್ಣು ಕಳೆದುಕೊಂಡದ್ದು ಇತ್ತೀಚಿನ ಪ್ರಕರಣ. ಹಲವು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿದರೂ ಆತನ ಎಡಗಣ್ಣಿನ ದೃಷ್ಟಿ ಮರಳಿಸಲು ಆಗಿಲ್ಲ. ವಿದ್ಯಾರ್ಥಿಗೆ ಹೊಡೆದ ಅಧ್ಯಾಪಕ, 'ಈ ವಿಷಯವನ್ನು ಯಾರಿಗಾದರೂ ತಿಳಿಸಿದರೆ ಪರಿಣಾಮ ನೆಟ್ಟಗಿರುವುದಿಲ್ಲ' ಎಂದು ಬೆದರಿಕೆ ಹಾಕಿದ್ದೂ ವರದಿಯಾಗಿದೆ. ಸದ್ಯಕ್ಕೆ ತಪ್ಪಿಸಿಕೊಂಡಿರುವ ಅಧ್ಯಾಪಕನನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಆದರೆ ವಿದ್ಯಾರ್ಥಿಯ ಎಡಗಣ್ಣಿನ ದೃಷ್ಟಿ ಮರಳಿಸುವವರು ಯಾರು? ಅಧ್ಯಾಪಕನ ಮುಂಗೋಪಕ್ಕೆ ಆ ವಿದ್ಯಾರ್ಥಿ ಜೀವನವಿಡೀ ನರಳುವಂತೆ ಆಗಿರುವುದಕ್ಕೆ ಪರಿಹಾರವೇನು?

ಏಪ್ರಿಲ್ ತಿಂಗಳಲ್ಲೂ ಇಂತಹ ಇನ್ನೊಂದು ಘಟನೆ ಬೆಂಗಳೂರಿನ ವಿದ್ಯಾರಣ್ಯಪುರದ ಶಾಲೆಯೊಂದರಲ್ಲಿ ನಡೆದಿತ್ತು. ಅಧ್ಯಾಪಕರೊಬ್ಬರು ವಿದ್ಯಾರ್ಥಿಗೆ ಕಿವಿಯ ಮೇಲೆ ಡಸ್ಟರ್‌ನಲ್ಲಿ ಎಡೆಬಿಡದೆ ಹೊಡೆದು, ಆ ಹುಡುಗನ ಕಿವಿತಮಟೆಗೆ ಗಂಭೀರ ಗಾಯವಾಗಿದೆ. ಈ ಪ್ರಕರಣದಲ್ಲೂ ವಿಷಯವನ್ನು ಪೋಷಕರಿಗೆ ತಿಳಿಸದಂತೆ ಬೆದರಿಕೆ ಹಾಕಲಾಗಿತ್ತು. 2009ರಲ್ಲಿ ಹೀಗೆಯೇ 11 ವರ್ಷದ ವಿದ್ಯಾರ್ಥಿನಿಯೊಬ್ಬಳನ್ನು ಶಿಕ್ಷಕನೊಬ್ಬ ಥಳಿಸಿದ್ದೇ ಅಲ್ಲದೆ, ಮೈದಾನದ ಬಿರುಬಿಸಿಲಲ್ಲಿ ಕೋಳಿಯಂತೆ ಕುಕ್ಕರುಗಾಲಲ್ಲಿ ಕೂರಿಸಿ, ಬೆನ್ನಿನ ಮೇಲೆ ಇಟ್ಟಿಗೆಯನ್ನೂ ಹೊರಿಸಲಾಗಿತ್ತು. ಪ್ರಜ್ಞಾಹೀನಳಾಗಿದ್ದ ವಿದ್ಯಾರ್ಥಿನಿ, ಎರಡು ದಿನಗಳ ಬಳಿಕ ಮೃತಪಟ್ಟಿದ್ದಳು. ಅಷ್ಟಕ್ಕೂ ಆ ವಿದ್ಯಾರ್ಥಿನಿ ಮಾಡಿದ ತಪ್ಪೆಂದರೆ, ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳನ್ನು ಪೂರ್ತಿಯಾಗಿ ಹೇಳದೇ ಇದ್ದುದು.

ಕೆಲವು  ಶಿಕ್ಷಕ, ಶಿಕ್ಷಕಿಯರು ಏಕೆ ಹೀಗೆ ರಾಕ್ಷಸರಂತೆ ವರ್ತಿಸುತ್ತಾರೆ? ಹೀಗೆ ಮಕ್ಕಳನ್ನು ಹಿಂಸಿಸುವುದರ ಮೂಲಕ ಹೆಚ್ಚು ಅಂಕ ಗಳಿಸುವಂತೆ ಮಾಡಲು ಸಾಧ್ಯವಿಲ್ಲ ಎನ್ನುವುದು ಇವರಿಗೇಕೆ ಅರ್ಥವಾಗುವುದಿಲ್ಲ? ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುವುದರ ಮೂಲಕ ಮಕ್ಕಳ ಕಲಿಕೆಯನ್ನು ಉತ್ತಮ ಪಡಿಸಲು ಸಾಧ್ಯವಿಲ್ಲ ಎಂದು ಹಲವು ಅಧ್ಯಯನಗಳು ಸ್ಪಷ್ಟವಾಗಿ ತಿಳಿಸಿವೆ. ಎಳೆಯ ಮಕ್ಕಳನ್ನು ಶಿಕ್ಷೆಗೆ ಒಳಪಡಿಸಿದರೆ. ಅದರ ಮಾನಸಿಕ ದುಷ್ಪರಿಣಾಮ ಆ ಎಳೆಯರ ಜೀವನದ ಉದ್ದಕ್ಕೂ ಕಾಣಿಸಿಕೊಳ್ಳುತ್ತದೆ. ಶಿಕ್ಷಕರು ನೀಡುವ ಶಿಕ್ಷೆ ಮಕ್ಕಳಲ್ಲಿ ಬಂಡುಕೋರ ಮನೋಭಾವವನ್ನು ಉಂಟು ಮಾಡಿ, ಮುಂದೆ ಆ ಮಕ್ಕಳು ಇನ್ನಷ್ಟು ನಿಯಮಭಂಗಗಳನ್ನು ಮಾಡಲು ಪ್ರಚೋದಿಸುವುದೂ ಇದೆ.

ವಿದ್ಯಾರ್ಥಿಗಳಿಗೆ ಶಿಕ್ಷೆ ಕೊಡುವುದನ್ನು ತಡೆಯಲು ನಮ್ಮಲ್ಲಿ ಕಠಿಣ ಕಾನೂನುಗಳಿವೆ. ಉಚಿತ ಮತ್ತು ಕಡ್ಡಾಯ ಶಿಕ್ಷಣದ ಮಕ್ಕಳ ಹಕ್ಕು ಕಾಯ್ದೆ (ಆರ್‌ಟಿಇ)ಯ 4ನೇ ಅಧ್ಯಾಯದ 17ನೇ ಪರಿಚ್ಛೇದದ ಪ್ರಕಾರ, ಯಾವುದೇ ವಿದ್ಯಾರ್ಥಿಗಳಿಗೆ ದೈಹಿಕ ಅಥವಾ ಮಾನಸಿಕ ಹಿಂಸೆ ಕೊಡುವುದನ್ನು ನಿಷೇಧಿಸಲಾಗಿದೆ. ಆದರೆ ನಮ್ಮಲ್ಲಿ ಕೆಲವು ಶಿಕ್ಷಕರಿಗೆ ಕಾನೂನಿನ ಅರಿವಾಗಲೀ, ಶಿಕ್ಷೆಯ ಭಯವಾಗಲೀ ಇದ್ದಂತೆ ಕಾಣಿಸುತ್ತಿಲ್ಲ. ಇಂತಹ ಪ್ರಕರಣಗಳು ಬಯಲಿಗೆ ಬರುವುದೂ ಕಡಿಮೆಯೇ. ಎಷ್ಟೋ ಶಾಲೆಗಳಲ್ಲಿ ತಮ್ಮ ಸಂಸ್ಥೆಯ ಪ್ರತಿಷ್ಠೆಗೆ ಕುಂದುಂಟಾಗುತ್ತದೆ ಎಂದು ಶಿಕ್ಷಕ–, ಸಿಬ್ಬಂದಿ ವರ್ಗದವರೇ ಪ್ರಕರಣಗಳನ್ನು ಮುಚ್ಚಿಡುತ್ತಾರೆ. ನೋವು ಅನುಭವಿಸಿದ ಮಕ್ಕಳೂ, ಶಿಕ್ಷಕರು ಅಂಕ ಕಡಿತಗೊಳಿಸುವ ಭಯದಿಂದ ಪ್ರಕರಣದ ಬಗ್ಗೆ ಬಾಯಿ ಬಿಡುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಪೋಷಕರೂ 'ಮಕ್ಕಳಿಗೆ ಶಿಕ್ಷೆಯ ಭಯ ಇರಬೇಕು' ಎಂಬ ಓಬೀರಾಯನ ಕಾಲದ ನಂಬಿಕೆಗೆ ಜೋತು ಬಿದ್ದು ಸುಮ್ಮನಿರುತ್ತಾರೆ. ಕಾನೂನಿನ ಪ್ರಕಾರ, ಇಂತಹ ಪ್ರಕರಣಗಳಲ್ಲಿ ಪೋಷಕರು ಕೂಡಾ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವಂತಿಲ್ಲ.

ಮಕ್ಕಳ ಮೇಲೆ ದೈಹಿಕ ಹಲ್ಲೆ ನಡೆಸುವ, ಅವರನ್ನು ಮಾನಸಿಕವಾಗಿ ಹಿಂಸಿಸುವ ಪ್ರಕರಣಗಳಲ್ಲಿ ಆರೋಪಿ ಶಿಕ್ಷಕರಿಗೆ ಕಠಿಣ ಶಿಕ್ಷೆ ಒದಗುವಂತೆ ನೋಡಿಕೊಳ್ಳಬೇಕು. ಇಂತಹ ಶಿಕ್ಷೆಯಾಗಿದೆ ಎನ್ನುವುದು ಸಮಾಜದಲ್ಲಿ ಎಲ್ಲರ ಗಮನಕ್ಕೂ ಬರುವಂತೆ ಪ್ರಚಾರವಾಗಬೇಕು. ಆಗ ಮಾತ್ರ ಮಕ್ಕಳನ್ನು ದೈಹಿಕ, ಮಾನಸಿಕವಾಗಿ ದಂಡಿಸುವ ಪ್ರಕರಣಗಳು ಇಲ್ಲವಾಗಬಹುದು. ಶಿಕ್ಷಕರು ಮತ್ತು ಪೋಷಕರು ಒಟ್ಟು ಸೇರಿ ಇಂತಹ ಪ್ರಕರಣಗಳು ನಡೆಯದಂತೆ ತಡೆಯುವ ವಾತಾವರಣ ನಿರ್ಮಾಣಕ್ಕೆ ಶ್ರಮಿಸಬೇಕು.

■ ಬಿ.ಎಂ. ಹನೀಫ್

ಕೆಲವು  ಶಿಕ್ಷಕ, ಶಿಕ್ಷಕಿಯರು ಏಕೆ ಹೀಗೆ ರಾಕ್ಷಸರಂತೆ ವರ್ತಿಸುತ್ತಾರೆ? ಹೀಗೆ ಮಕ್ಕಳನ್ನು ಹಿಂಸಿಸುವುದರ ಮೂಲಕ ಹೆಚ್ಚು ಅಂಕ ಗಳಿಸುವಂತೆ ಮಾಡಲು ಸಾಧ್ಯವಿಲ್ಲ ಎನ್ನುವುದು ಇವರಿಗೇಕೆ ಅರ್ಥವಾಗುವುದಿಲ್ಲ?



ಈಶ್ವರ್